ಮಾಡಲಿಲ್ಲವೆಂದು ಹೇಳುವಹಾಗೆ ಇಲ್ಲ ಇವರು. ಕೋರ್ಟ್ ಡೈರೆಕ್ಷನ್ ಕೊಟ್ಟಿದೆ.

ಅಧ್ಯಕ್ಷರು: ಕಾನೂನು ಪೊಸಿಷನ್ ಕರೆಕ್ಟಾಗಿ ಎಕ್ಸ್‌ಪ್ಲೈನ್ ಮಾಡಿದ್ದಾರೆ. ಅವರು ಕ್ಲಿಯರ್ ಆಗಿ ಹೇಳಿದ್ದಾರೆ. ಉಚ್ಚನ್ಯಾಯಾಲಯದ ತೀರ್ಪಿಗೆ ಒಳಪಡುತ್ತೇವೆಂದು ಹೇಳಿದ್ದಾರೆ ಆದೇಶದಲ್ಲಿ. ಆದ್ದರಿಂದ ಸಮಸ್ಯೆ ಇಲ್ಲ.

ಶ್ರೀ ಪಿ.ಸಿ.ಸಿದ್ಧನಗೌಡರ್: ಇದು ಸರಿಯಲ್ಲ.

ಅಧ್ಯಕ್ಷರು: ಕೋರ್ಟ್ ತೀರ್ಪು ಬಂದ ತಕ್ಷಣ ಅಧಿಕಾರವನ್ನು ಹ್ಯಾಂಡ್‌ಓವರ್ ಮಾಡುತ್ತೇವೆಂದು ಹೇಳಿದ್ದಾರೆ. ಕಾನೂನಿನಲ್ಲಿ ಅವಕಾಶವಿಲ್ಲ. ಕಾನೂನನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅಲ್ಲಿ ನಿಧಾನ ಮಾಡಿದ್ದಾರೆ. ಇಲ್ಲಿ ಆರ್ಡರ್‌ಂಟ್ ಮಾಡಿದ್ದಾರೆ. ಎಲ್ಲಾ ಕಡೆಗೂ ಒಂದೇ ವೇಗದಲ್ಲಿ ಹೋಗಬೇಕಾಗುತ್ತದೆ.

ಶ್ರೀ ಪಿ.ಸಿ.ಸಿದ್ಧನಗೌಡರ್: ಒಂದು ಕಡೆ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಇಲಾಖೆಯಲ್ಲಿ ಎಕ್ಸ್‌ಟೆಂಡ್ ಮಾಡುವುದಕ್ಕೆ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ. ಅವರಿಗೆ ಬೇಕಾದವರನ್ನು ಅಲ್ಲಿ ತಂದು ಇಡುತ್ತಾರೆ. ಉತ್ತರ ಕೊಡುವ ಹಾಗೆ ಇಲ್ಲ. ★★

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಅದಕ್ಕೆ ವಿರುದ್ಧವಾಗಿ ಮಾತನಾಡಬೇಕು ಅಷ್ಟೆ ಇಲ್ಲಿ.

ಅಧ್ಯಕ್ಷರು: ಇರಲಿ. ಅವರ ಆಪಾದನೆ ಕಡತಕ್ಕೆ ಹೋಗುವುದಿಲ್ಲ. ಇದನ್ನು ಪತ್ರಿಕೆಯವರಿಗೂ ಹೇಳುತ್ತೇನೆ. ಹೀಗೆಲ್ಲಾ ಹೇಳುವುದಕ್ಕೆ ಬರುವುದಿಲ್ಲ. ಇದೆಲ್ಲ ನೋಟೀಸ್ ಕೊಟ್ಟು ಬರಬೇಕಾಗುತ್ತದೆ.

10. ಅಧ್ಯಕ್ಷರ ತೀರ್ಪು

ವಿಷಯ: ದಿ.3-11-1998ರ ನಡವಳಿಕೆಯಲ್ಲಿ ಕಡತದಿಂದ ತೆಗೆದ ಪದಗಳು

ದಿನಾಂಕ 3-11-1998ರಂದು ವಿಧಾನಸಭೆಯಲ್ಲಿ ಕಬ್ಬನ್‌ಪಾರ್ಕಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ಚರ್ಚೆಯಲ್ಲಿ ಸನ್ಮಾನ್ಯ ಸದಸ್ಯರುಗಳು ಭಾಗವಹಿಸಿ ಮಾತನಾಡುವಾಗ ಈ ಕೆಳಕಂಡ ಪದಗಳನ್ನು ಮಾನ್ಯಸದಸ್ಯರಾದ ಶ್ರೀ ಹೆಚ್.ಎನ್.ನಂಜೇಗೌಡರು ಬಳಕೆ ಮಾಡಿರುತ್ತಾರೆ. ಅದನ್ನು ಓದುತ್ತೇನೆ

★★ ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

1. ''ಜಡ್ಜಸ್ ಹದ್ದುಮೀರಿ ವರ್ತಿಸುತ್ತಾರೆ, ಕೆಲವರು ಮಾತ್ರ

2. ಆ ಚೀಫ್ ಜಡ್ಜನ್ನು ತಂದು ಕೂಡಿಸಿ ಅಸೆಂಬ್ಲಿ ಡಿಸಾಲ್ವ್ ಮಾಡಿ ಸಲ್ಡಾನ ಅವರನ್ನು ಪಬ್ಲಿಕ್ ಗ್ರಿವೆನ್ಸಸ್ ಮಿನಿಸ್ಟರನ್ನಾಗಿ ಮಾಡಿ ನಡೆಸಿಕೊಂಡು ಹೋಗಿ.

3. ಈ ಪೋಕರಿ ಕೇಸನ್ನು ತೆಗೆದುಕೊಂಡು, ಇವೆಲ್ಲಾ ಪೋಕರಿ ಕೇಸ್ ಎಂದು ನಾನು ಕರೆಯುವುದು.

4. ಲಲ್ಲೂಪ್ರಸಾದ್ ಯಾದವ್ ಇರಬಹುದು.

5. ಈ ಸದನದ ಮುಖಾಂತರ ಜಡ್ಜಸ್‌ಗಳಿಗೆ ವಾರ್ನಿಂಗ್ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಇವರುಗಳು ಬಾಯಿಗೆ ಬಂದಹಾಗೆ ಬರೆದುಕೊಂಡು ಹದ್ದುಮೀರಿ ವರ್ತಿಸಿದರೆ ಸಹಿಸುವುದಕ್ಕೆ ಆಗುವುದಿಲ್ಲ.

6. "We know how to cut them to size. This, they must be aware of"

7. ಈ ಮುಖ್ಯ ನ್ಯಾಯಾಧೀಶರ ಕೊಠಡಿ ಒಂದಕ್ಕೆ ಮಾತ್ರ 40ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇವನ್ನು ಊಹೆ ಮಾಡಿಕೊಂಡರೆ ಇವರು ಈ ದೇಶಕ್ಕೆ ಎಂತಹ ಮಹಾನ್ ಪುತ್ರರು ಎಂದು ಅರ್ಥವಾಗುತ್ತದೆ.''

ಈ ಪದಗಳು ಸತ್‌ಸಂಪ್ರದಾಯದ ಹಿತದೃಷ್ಟಿಯಿಂದ ಸಾರ್ವಜನಿಕರಿಗೆ ನಮ್ಮ ಕಲಾಪಗಳ ಬಗ್ಗೆ ಗೌರವ ಮೂಡಿಸುವ ದೃಷ್ಟಿಯಿಂದ ಮತ್ತೆ ಯಾವುದೇ ವರ್ಗದ ಜನರ ಬಗ್ಗೆ ನಮಗೆ ಗೌರವವಿದೆ; ಯಾರಿಗೂ ಕೂಡ ಮನಸ್ಸು ಗಾಯಗೊಳಿಸುವ ಉದ್ದೇಶ ನಮಗಿರುವುದಿಲ್ಲ. ಇಲ್ಲಿ ನಮಗೆ ಸಿಗತಕ್ಕ ಹಕ್ಕನ್ನು ಕೂಡ ದುರುಪಯೋಗಪಡಿಸಿಕೊಳ್ಳುವುದಿಲ್ಲ. ಸದುಪಯೋಗಕ್ಕೆ ಮಾತ್ರ ಉಪಯೋಗಿಸಿಕೊಳ್ಳತಕ್ಕ ಉದ್ದೇಶವನ್ನು ಹೊಂದಿದ್ದೇವೆ ಎನ್ನುವ ಅಭಿಪ್ರಾಯವನ್ನು ಖಚಿತಪಡಿಸುವ ಹಿನ್ನಲೆಯಿಂದ ಈ ಪದಗಳನ್ನು ಕಡತದಿಂದ ತೆಗೆದುಹಾಕಲು ನಾನು ಆದೇಶವನ್ನು ನೀಡಿದ್ದೇನೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ತೀರ್ಪನ್ನು ಪ್ರಶ್ನೆ ಮಾಡುವುದಿಲ್ಲ. ಬಹುಶಃ ಆವೊತ್ತು ನೀವು ಆವೇಶದಲ್ಲಿ ಇದ್ದಿರಿ. ನಾನೂ ಆವೇಶದಲ್ಲಿದ್ದೆ. ಕಾನೂನಿನ ಚೌಕಟ್ಟಿನೊಳಗೆ ಈ ಪದಗಳನ್ನು ತೆಗೆಯಬೇಕಾದ್ದು ಇರಲಿಲ್ಲ. ನನಗೆ ಗೊತ್ತಿದೆ, ಅದು ತಮಗೂ ಗೊತ್ತಿದೆ. ಆದರೆ

ಸತ್‌ಸಂಪ್ರದಾಯ ಇಂತಹ ಪದಗಳು ಸದಸ್ಯರ ಬಾಯಿಂದ ಬರಬಾರದೆಂದು ಕೆಲವರು ಹೇಳಿದ್ದರಿಂದ, ಇದು ಸರಂಡರ್ ಅಲ್ಲ. ಅದನ್ನು ಮಾತ್ರ ಖಚಿತವಾಗಿ ಹೇಳುತ್ತೇನೆ. ಭಾರಿ ವಿಚಾರವನ್ನು ಮಾತನಾಡಿದ್ದೇನೆ ಅದರಲ್ಲಿ ಕೆಲವು ಅಡ್ಜೆಕ್ಟೀವ್ಸ್ ಬಂತು. ಅದು ಸರಿಯಿಲ್ಲವೆಂದು ನಿಮಗೆ ಅನ್ನಿಸಿತು. ಸಭೆಯಲ್ಲಿ ಮಾತನಾಡತಕ್ಕ ಸದಸ್ಯರಿಗೆ ಈ ರೀತಿ ಮಾತನಾಡಬಾರದೆಂದು ಹೇಳತಕ್ಕ ಹಕ್ಕು ನಾವು ಮಾತನಾಡುವುದು ಸರಿ ತಪ್ಪು ಎಂದು ಹೇಳತಕ್ಕ ಹಕ್ಕು ಸಭಾಧ್ಯಕ್ಷರನ್ನು ಬಿಟ್ಟರೆ ಬೇರೆ ಯಾರಿಗೂ ಇಲ್ಲ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರಿಗೂ ಇಲ್ಲ. ಈ ಕಾನೂನು ನನಗೆ ಅರಿವಿದೆ. ಮತ್ತೆ ಇದು ಅದ ಮೇಲೆ ಒಂದು ಪ್ರಿವಿಲೇಜ್ ಮೋಷನ್ ಬೇರೆ ಕೊಟ್ಟಿದ್ದೇನೆ; ಸಲ್ಡಾನ ಅವರ ಮೇಲೆ. ಸಲ್ಡಾನಾರವರು ಜಸ್ಟೀಸ್ ಯಾವಾಗ? ಛೇಂಬರ್‌ನಲ್ಲಿದ್ದಾಗ ಜಸ್ಟೀಸ್. ಮನೆಯಲ್ಲಿದ್ದಾಗ ಜಸ್ಟೀಸ್. ಆಗ ಅವರು ನ್ಯಾಯಾಧೀಶರು. ಒಂದು ಸಾರ್ವಜನಿಕ ಸಭೆಗೆ ಹೋದರೆ, ಅವರೊಂದು ಕ್ಲಬ್‌ಗೆ ಹೋದರೆ, ಅಥವ ಒಂದು ಸಂತೆಗೆ ಹೋದರೆ ಅಲ್ಲಿ ಮಾತನಾಡಿದರೆ ಸಾಮಾನ್ಯ ಜನರಿಗೆ ಏನು ಸೌಲಭ್ಯ ಏನು ಪ್ರಿವಿಲೇಜಸ್ ಇರುತ್ತದೆ ಸಾಮಾನ್ಯ ನಾಗರೀಕರಿಗೆ ಎಷ್ಟು ಹಕ್ಕು ಇರುತ್ತದೆ ಅಷ್ಟೇ ಹಕ್ಕು ಅವರಿಗೆ ಇರತಕ್ಕದ್ದು. ನಮ್ಮ ಕಳಕಳಿ ಏನೆಂದರೆ ಇದನ್ನು ನಾವು ಚರ್ಚೆಗೆ ತೆಗೆದುಕೊಂಡಾಗ ಅನೇಕ ವಿಚಾರಗಳನ್ನು ಹೇಳಬೇಕೆಂದು ತಯಾರಾಗಿದ್ದೇನೆ. ಇವತ್ತು ಸಧ್ಯಕ್ಕೆ ಒಂದು ಕೋಟನ್ನು ಮಾತ್ರ ಹೇಳಿಬಿಟ್ಟು ತಮ್ಮ ತೀರ್ಪನ್ನು ಕೇಳುತ್ತೇನೆ. ನೋಡಿ, ಜಸ್ಟೀಸ್ ವಿ.ಆರ್.ಕೃಷ್ಣಯ್ಯರ್‌ರವರು ಅವರ ಕೋರ್ಟ್ಸ್ ಅಂಡ್ ಟ್ರಯಲ್ಸ್ ಅದರಲ್ಲಿ ಹೇಳುತ್ತಾರೆ:

"The judicial sector must be transformed into an arm of the Constitutional revolution."

SMT. PRAMILA NESARGI: I am on a Point of Order.

327ನೇ ಸೆಕ್ಷನ್ Explanation(x) ಪ್ರಕಾರ ಇದನ್ನು ಡಿಸ್‌ಕಷನ್ ಮಾಡಬೇಕಾದರೆ 'Rules to be observed while speaking' "reflect upon the conduct of President or any Governor or any Court of Justice or use the Governor's or President's name for the purpose of influencing a debate." ಆದ್ದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾವುದೇ ನ್ಯಾಯಾಧೀಶರ...

ಅಧ್ಯಕ್ಷರು: ಮಾನ್ಯ ನಂಜೇಗೌಡರು ಕ್ಲಾರಿಫೈ ಮಾಡಿದರು. ಆಕ್ಷೇಪಾರ್ಹವಾದ ಪದಗಳನ್ನು ತೆಗೆದುಬಿಡುತ್ತೇನೆ. ಒಬ್ಬ ಜಡ್ಜ್ ಕಛೇರಿಯಲ್ಲಿ ಕುಳಿತು, ಮನೆಯಲ್ಲಿ

ಕುಳಿತು ತಮ್ಮ ಮುಂದಿರುವ ಯಾವುದಾದರೂ ಪಿಟಿಷನ್ ಇತ್ಯರ್ಥ ಮಾಡುವಾಗ ಜಡ್ಜ್‌ಮೆಂಟ್ ಡೆಲಿವರ್ ಮಾಡುವಾಗ ಅವರು ಜಡ್ಜಾಗಿರುತ್ತಾರೆ. ಯಾವುದೋ ಸಭೆಗೆ ಹೋಗಿ ಮಾತನಾಡತಕ್ಕ ಸಂದರ್ಭದಲ್ಲಿ....

SMT. PRAMILA NESARGI: It amounts to conduct.

MR. SPEAKER: Conduct of an individual, not the conduct of the Judge.

SMT. PRAMILA NESARGI: Conduct of a Judge whether he is in the house or outside the house, it is not permissible.

ಅಧ್ಯಕ್ಷರು: ಅವರ ಹತ್ತಿರ ಸ್ಪಷ್ಟೀಕರಣ ಕೇಳುತ್ತೇನೆ. ಮಾನ್ಯ ನಂಜೇಗೌಡರು ತಾವು ಜಸ್ಟೀಸ್ ಸಲ್ದಾನರವರ ವಿಚಾರ ಹೇಳುತ್ತಿದ್ದಿರೋ, ಮಿಸ್ಟರ್ ಸಲ್ದಾನಾರವರ ವಿಚಾರ ಹೇಳುತ್ತಿದ್ದಿರೋ?

ಶ್ರೀ ಹೆಚ್.ಎನ್.ನಂಜೇಗೌಡ: ನಾನು ಹೇಳುತ್ತಿರುವುದು ಮಿಸ್ಟರ್ ಸಲ್ದಾನಾರವರ ವಿಷಯ.

ಅಧ್ಯಕ್ಷರು: ಜಸ್ಟೀಸ್ ಸಲ್ದಾನಾರವರು ಬೆಳಗಾಂನಲ್ಲಿ...

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾನು ಹೇಳತಕ್ಕದ್ದು ಮಿಸ್ಟರ್ ಸಲ್ದಾನಾರವರ ಬಗ್ಗೆ, using the name of a Judge, ಅವರ ನೇಮ್ ಉಪಯೋಗಿಸುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ನಮ್ಮ ಸದನದ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮಾಡುವ ವೇಳೆಗೆ ಅವರು ಕೋರ್ಟ್‌ನಲ್ಲಿ ಯಾವ ಕೇಸನ್ನು ಇತ್ಯರ್ಥ ಮಾಡುತ್ತಿರಲಿಲ್ಲ. ಬೇರೆ ಎಲ್ಲೋ ಹೋಗಿ ನಮ್ಮ ಕಲಾಪಗಳ ಬಗ್ಗೆ ಮಾತನಾಡಿದ್ದಾರೆಂದು ಹೇಳಿ ಅವರು ಚರ್ಚೆ ಮಾಡುತ್ತಿದ್ದಾರೆ.

SMT. PRAMILA NESARGI: Indirectly, you are discussing the conduct of a Judge. Whether it is inside the house or outside the Court premises, it is not permissible.

ಸಭಾಧ್ಯಕ್ಷರು: ನನಗೆ ಇನ್‌ಡೈರೆಕ್ಟ್ ಮೆಥೆಡ್ಸ್ ಗೊತ್ತಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಸಂವಿಧಾನದಲ್ಲೂ ಕೂಡ ಅದಕ್ಕೆ ಪರ್ಮಿಷನ್ ಇಲ್ಲ. ನಾವೇ ಮಾಡಿರತಕ್ಕ ರೂಲ್ಸ್‌ನಲ್ಲಿ ಕೂಡ ಪರ್ಮಿಷನ್ ಇಲ್ಲ.

ಅಧ್ಯಕ್ಷರು: ಈಗ ನ್ಯಾಯಾಧೀಶರ ಬಗ್ಗೆ ನ್ಯಾಯಾಧೀಶರನ್ನು ಟೀಕೆ ಮಾಡಿರುವ ಬಗ್ಗೆ ಅವರು ಉಚ್ಚಾರ ಮಾಡಿರತಕ್ಕ ಪದಗಳ ತೀರ್ಪಿನ ಬಗ್ಗೆ ನಮ್ಮ ಮುಂದಿರತಕ್ಕ ಯಾವುದಾದರೂ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದರೆ ನೀವು ಎತ್ತಿರತಕ್ಕ ಕ್ರಿಯಾಲೋಪ ಸರಿ.

ಶ್ರೀಮತಿ ಪ್ರಮೀಳಾನೇಸರ್ಗಿ: ನಾನು ಒಂದೇ ಒಂದು ವರ್ಡ್ ಉಪಯೋಗಿಸುತ್ತೇನೆ. ನಾನು ಹೇಳತಕ್ಕದ್ದು ಕಾಂಡಕ್ಟ್ ಬಗ್ಗೆ. I am very clear.

MR. SPEAKER: Conduct as a Judge?

SMT. PRAMILA NESARGI: I am not concerned with the judgement or any other thing.

MR. SPEAKER: Conduct as a Judge?

SMT. PRAMILA NESARGI: Conduct of a Judge whether it is inside the Court premises while delivering the Judgment or any opinion rendered by him outside, by the Judge. He is called as a Judge wherever he is.

ಅಧ್ಯಕ್ಷರು: ಈಗ ನಾನು ತಮ್ಮನ್ನು ಕೇಳುತ್ತೇನೆ. ಪದಗಳನ್ನು ಅವರು ಏನು ಬಳಸಿದ್ದರು ಅದನ್ನು ಸದನದ ಕಲಾಪಗಳಿಂದ ತೆಗೆದುಹಾಕಿಬಿಟ್ಟಿದ್ದೇನೆ. ಇದನ್ನು ಅವರು ಹೊರಗಡೆ ಹೇಳಿದ್ದರೆ ಅದು ಬೇರೆ ಪರಿಣಾಮ ಆಗುತ್ತಿತ್ತು. ಆದರೆ ನಮಗೆ ಇಮ್ಯುನಿಟಿ ಇದೆ ಎಂದು ಹೇಳಿ ನಾವು ಹಠ ಸಾಧಿಸುವುದಕ್ಕೆ ಹೋದೆವಾ? ನ್ಯಾಯಾಲಯಕ್ಕೆ ಗೌರವ ಕೊಡತಕ್ಕಂಥ ಪ್ರವೃತ್ತಿಯನ್ನು ಈ ಸದನದಿಂದ ನಾವು ಪ್ರಾರಂಭ ಮಾಡಬೇಕು. ಹೊಸ ಒಂದು ಪ್ರಿಸಿಡೆಂಟ್ ನಮ್ಮಿಂದ ಆಗಬಾರದು ಎಂದು ಹೇಳಿ ನಾವೇ ನಾವೇ ಸ್ವಯಂ ವಿವೇಚನೆಯಿಂದ ಇಡೀ ಕಲಾಪಗಳನ್ನು ಪರಾಮರ್ಶೆ ಮಾಡಿ ಯಾವುದು ನಮಗೆ ಗೌರವ ತರುವುದಿಲ್ಲ, ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯ ತರುವುದಿಲ್ಲ ಎಂದು ಹೇಳಿ ನನಗೆ ಅನ್ನಿಸಿದ್ದರಿಂದ ಅದನ್ನು ತೆಗೆದುಹಾಕಿದ್ದೇನೆ. ಜಡ್ಜ್ ಆಗಿ ಅವರ ಕಾಂಡಕ್ಟ್‌ನ್ನು ನಾವು ಚರ್ಚೆ ಮಾಡತಕ್ಕಂಥಾದ್ದು ಸಾಧು ಅಲ್ಲ. ಅದು ಒಳ್ಳೆಯ ಪದ್ಧತಿ ಅಲ್ಲ. ಜಡ್ಜ್ ಅಲ್ಲದೇನೆ ಬೇರೆ ಯಾವುದೋ ಸಭೆಸಮಾರಂಭಗಳಲ್ಲಿ ಅವರು ಹೋಗಿ ಅತಿಥಿಯಾಗಿ ಭಾಗವಹಿಸಿ ಇಡೀ ಸದನದ ಕಲಾಪಗಳಿಗೆ ಸಂಬಂಧಿಸಿದಂತೆ ಅವರು ಏನು ಹೇಳುತ್ತಿದ್ದಾರೆ,-

ಶ್ರೀಮತಿ ಪ್ರಮೀಳಾ ನೇಸರ್ಗಿ: ಆ ಪ್ರಿವಿಲೇಜ್ ಮೋಷನ್ ಅನ್ನು ತಾವು ಚರ್ಚೆಗೆ ತೆಗೆದುಕೊಂಡಿದ್ದೀರಾ?

ಅಧ್ಯಕ್ಷರು: ಅದಕ್ಕೆ ನಾನು ರೂಲಿಂಗ್ ಕೊಡುತ್ತೇನೆ. ಪ್ರಿವಿಲೇಜ್ ಮೋಷನ್ ಅನ್ನು ನಾನು ಅಡ್ಮಿಟ್ ಮಾಡುತ್ತೇನೋ, ಮಾಡವುದಿಲ್ಲವೋ, ಅವರು ಏನು ಹೇಳುವುದಕ್ಕೆ ನಿಂತಿದ್ದಾರೆ, ಅದನ್ನು ನಾನು ಕೇಳಬೇಕಲ್ಲ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾತನಾಡುವ ಸಂದರ್ಭದಲ್ಲಿ ಯಾವುದೇ ಸದಸ್ಯರು - he has taken an oath under the Constitution. He cannot. Under the Constitution, ಪ್ರಮಾಣವಚನಕ್ಕೆ ವಿರುದ್ಧವಾಗಿ ನಾವು....

ಅಧ್ಯಕ್ಷರು: ತಾವು ಜಸ್ಟೀಸ್ ರಾಮಾಜೋಯಿಸ್ ಅವರು ಮೊನ್ನೆ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಕೊಟ್ಟಿರುವಂಥ ಇಂಟರ್‌ವ್ಯೂವನ್ನು ಓದಿದ್ದೀರಾ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಓದಿದ್ದೇನೆ.

ಅಧ್ಯಕ್ಷರು: ರಾಮಾಜೋಯಿಸ್ ಅವರು ಏನು ಹೇಳಿದ್ದಾರೆ? ಒಬ್ಬ ಜಡ್ಜ್ ಹೇಗೆ ಇರಬೇಕು ಎಂದು ಹೇಳಿದ್ದಾರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಸನ್ಯಾಸಿ ಎಂದು ಹೇಳುತ್ತಾರೆ. ಇದು ಅವರು ಹೇಳಿರತಕ್ಕಂಥಾದ್ದು.

ಅಧ್ಯಕ್ಷರು: ರಾಮಾಜೋಯಿಸ್ ಅವರಿಗಿಂತ ಉನ್ನತ ವ್ಯಕ್ತಿ ನಮಗೆ ಬೇಕಾ? ಈ ಸದನ ತೆಗೆದುಕೊಂಡಿರತಕ್ಕಂಥ ನಿರ್ಣಯ ಕೂಡ, ಕೆಲವು ಪದಗಳನ್ನು ತೆಗೆಯತಕ್ಕದ್ದು, ಅದರ ಬಗ್ಗೆ ನಮ್ಮದೇ ಆದಂಥ ರೀತಿಯಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸತಕ್ಕಂಥಾದ್ದು, ಕೂಡ ಅದೆಲ್ಲಾ ಹಿರಿಯ ಮುತ್ಸದ್ದಿಗಳು ಅನೇಕ ಸಂದರ್ಭಗಳಲ್ಲಿ ಹೇಳಿರತಕ್ಕಂಥ ಮಾತುಗಳಿಗೆ ಗೌರವ ಕೊಡತಕ್ಕಂಥ ಉದ್ದೇಶದಿಂದ, ಅದಕ್ಕೆ ತಲೆಬಾಗತಕ್ಕಂಥ ಉದ್ದೇಶದಿಂದ... ಏಕೆಂದರೆ ನಾವೇನೂ ಇಲ್ಲಿ ಸರ್ವಜ್ಞರು ಅಲ್ಲ. ನಾವು ಸಾರ್ವಜನಿಕ ಅಭಿಪ್ರಾಯಕ್ಕೆ ಗೌರವ ಕೊಡಬೇಕಾಗುತ್ತದೆ. ಸತ್ಸಂಪ್ರದಾಯಗಳನ್ನು ನಾವು ಕಾಪಾಡಬೇಕು. ನಾವು ಹಾಗೆ ಮಾಡುವಾಗ ಇದು ಎಲ್ಲರಿಗೂ ಅನ್ವಿಯಿಸುತ್ತದೆ ಅಲ್ಲವೇ? ನನಗೆ ಪ್ರೇರಣೆ ಅವರ ಇಂಟರ್‌ವ್ಯೂ. ಯಾರು ಆ ರೀತಿ ವರ್ತಿಸುವುದಿಲ್ಲ ಅಂತಹವರಿಗೆ ಹಾಗೆ ವರ್ತಿಸ ಬೇಕು ಎಂದು ಹೇಳತಕ್ಕಂಥಾದ್ದು ಈ ಸದನದ ಉದ್ದೇಶ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಧ್ಯಕ್ಷರೇ, ನಾನು ಹೇಳತಕ್ಕಂಥಾದ್ದು ಏನೆಂದರೆ ಅವರನ್ನು ಪ್ರಜೆಗಳಾಗಿ ನೋಡಬೇಕಾ ಅಥವಾ ನ್ಯಾಯಾಧೀಶರಾಗಿ ನೋಡಬೇಕಾ?

ಅವರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಹಕ್ಕು ಇದೆ.

ಅಧ್ಯಕ್ಷರು: ಈಗ ನಿಮಗೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ನಿಮಗೆ ಪ್ರಿವಿಲೇಜ್ ಇದೆ. ನೀವು ಎಂ.ಟಿ.ಆರ್. ಹೋಟೆಲಿಗೆ ಹೋಗುತ್ತೀರಿ. ಅಲ್ಲಿ ನೀವು ಹೋದಾಗ ರಷ್ ಜಾಸ್ತಿ ಇರುತ್ತದೆ ಮತ್ತು ಕ್ಯೂನಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ನೀವು ಎಂ.ಎಲ್.ಎ ಎಂದು ಹೇಳಿ ಕ್ಯೂ ಬಿಟ್ಟು ಸೀದಾ ಹೋಗಿ ಗ್ಲಾಸ್, ಪ್ಲೇಟುಗಳನ್ನು ಒಡೆದು ಕೂತುಬಿಡುತ್ತಾರಾ? ಅವರು ತಾವಾಗಿಯೇ ನಿಮಗೆ ಗೌರವ ಕೊಡಬೇಕು. ಎಂ.ಎಲ್.ಎ. ಬಂದಿದ್ದಾರೆ, ಪಾಪ, ಅವರಿಗೆ ಜಾಸ್ತಿ ಕೆಲಸ ಇರುತ್ತದೆ, 'ಒಳಗಡೆ ಕುಲಿತುಕೊಳ್ಳಿಯಮ್ಮ' ತಿಂಡಿ ತಂದುಕೊಡುತ್ತೇನೆ ಎಂದು ಹೇಳಿದರೆ ಪರವಾಗಿಲ್ಲ. ಎಂ.ಟಿ.ಆರ್. ಹೋಟೆಲಿನಲ್ಲಿ ನಿಮ್ಮ ಪ್ರಿವಿಲೇಜ್ ಕೆಲಸ ಮಾಡುತ್ತದೆಯೆ?

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾವು ಕೇಳುವುದೇ ಇಲ್ಲ.

ಅಧ್ಯಕ್ಷರು: ಪ್ರಿವಿಲೇಜ್ ಎನ್ನತಕ್ಕಂಥಾದ್ದು ಕಣ್ಣಿಗೆ ಕಾಣದೇ ಇರತಕ್ಕಂಥ, ಅಗೋಚರವಾದಂಥ ಗೌರವ. ಅವರಿಗೆ ಆಗಲಿ, ನಮಗಾಗಲೀ, ಮತ್ತೊಬ್ಬರಿಗಾಗಲೀ ಯಾರ ಕಣ್ಣಿಗೂ ಕಾಣದೇ ಇರತಕ್ಕಂಥ ಅಗೋಚರವಾದಂಥ ಗೌರವ ಅದು. ಯಾರಿಗೆ ಈ ಅಗೋಚರವಾದಂಥ ಗೌರವವನ್ನು ಉಳಿಸಿಕೊಂಡು, ಬೆಳೆಸಿಕೊಂಡು, ಮೈಗೂಡಿಸಿಕೊಂಡು ಹೋಗುತಕ್ಕಂಥ ಸಾಮರ್ಥ್ಯ ಇರುವುದಿಲ್ಲವೋ ಅವರು ಆ ಗೌರವಕ್ಕೆ, ಆ ಸ್ಥಾನಕ್ಕೆ ಅರ್ಹರಾಗಿರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅದನ್ನು ನಾವು ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಹೇಳತಕ್ಕಂಥ ಹಕ್ಕು ಈ ಸದನಕ್ಕೆ ಇದೆ. ಯಾರು ನಮ್ಮ ಸ್ವಾಭಿಮಾನವನ್ನು ಕೆಣಕುತ್ತಾರೆ, ಯಾರು ನಮ್ಮ ಕಲಾಪಗಳ ಗುಣಮಟ್ಟವನ್ನು ಪ್ರಶ್ನೆ ಮಾಡುತ್ತಾರೆ, ಯಾರು ನಮ್ಮ ಅರ್ಹತೆಯನ್ನು ಪ್ರಶ್ನೆ ಮಾಡುತ್ತಾರೆ, ಅದನ್ನು ಸಹಿಸಿಕೊಂಡು ಸಾರ್ವಜನಿಕ ಜೀವನದಲ್ಲಿ ಇರತಕ್ಕಂಥಾದ್ದು, ಅಂತಹ ಪ್ರಜಾತಂತ್ರವನ್ನು ಉಳಿಸಿಕೊಂಡು ಹೋಗುವುದು ನನ್ನಿಂದ ಸಾಧ್ಯವಿಲ್ಲ. ನಾನು ಅರ್ಥಮಾಡಿಕೊಂಡಿರುವಂಥ ಪ್ರಜಾತಂತ್ರ ವ್ಯವಸ್ಥೆ ಬೇರೆ. ನೀವು ತುರ್ತುಪರಿಸ್ಥಿತಿ ವಿರುದ್ಧ ಹೋರಾಟ ಮಾಡಿದಂಥವರು. ನಿಮ್ಮ ಬಾಯಲ್ಲಿ ಈ ಮಾತು ಬರಬಹುದಾ? ನಾನಾದರೂ ಆವತ್ತು ಕಾಂಗ್ರೆಸ್ ಪಕ್ಷದಲ್ಲಿದ್ದೆ. ನನಗಾದರೂ ಅಪರಾಧಿ ಪ್ರಜ್ಞೆ ಕಾಡಬೇಕು. ನೀವು ಮೂಲಭೂತ ಹಕ್ಕಿಗಾಗಿ ಹೋರಾಟ ಮಾಡಿದಂಥವರು ಸ್ವಾತಂತ್ರ್ಯ ರಕ್ಷಣೆ ಬೇಕು ಎಂದು ಹೇಳಿದವರು, ಆರ್ಟಿಕಲ್ 19ನ್ನು ಪವಿತ್ರ ಎಂದು ಹೇಳಿದವರು...

ಶ್ರೀಮತಿ ಪ್ರಮೀಳಾ ನೇಸರ್ಗಿ: ಇವತ್ತೂ ಅದನ್ನು ನಾವು ಪ್ರತಿಪಾದನೆ ಮಾಡುತ್ತಾ

ಇರತಕ್ಕಂಥಾದ್ದು.

ಅಧ್ಯಕ್ಷರು: ನಾವು ಟೇಲರ್ ಅಂಗಡಿಯಲ್ಲಿ, ಬಾರ್ಬರ್‌ಶಾಪ್‌ನಲ್ಲಿ, ಹೋಟೇಲ್‌ಗಳಲ್ಲಿ ನಮ್ಮ ಪ್ರಿವಿಲೇಜ್‌ನ್ನು ಗಾರ್ಡ್ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೆ? ನಮಗಿರುವ ಪ್ರಿವಿಲೇಜ್ ಅವರಿಗಾದರೂ ಅಷ್ಟೆ, ನಮಗಾದರೂ ಅಷ್ಟೆ. A Judge is a Judge at home, at office, all the 24 hours only when he discharges his duties as the Judge.

SMT.PRAMILA NESARGI: A Judge is a Judge all the 24 hours. Even at home, he can discharge his duties.

MR. SPEAKER: Yes, That is what I said. It is subject to a condition when he discharges his duties as Judge, read with reference to the interview given by Sri Rama Jois.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಲ್ಲ ಅಧ್ಯಕ್ಷರೇ, ನಾನು ಇದನ್ನು ನಿರ್ಧಾರ ಮಾಡಬಹುದಾ? ಅವರು ಏನು ಮಾಡುತ್ತಾರೆ, ಹೇಗೆ ಮಾಡುತ್ತಾರೆ ಎಂದು ನಾವು ನಿರ್ಧಾರ ಮಾಡಬಹುದೇನು?

ಅಧ್ಯಕ್ಷರು: ನಮ್ಮ ಗುಣಮಟ್ಟವನ್ನು ಪ್ರಶ್ನೆ ಮಾಡತಕ್ಕಂಥ ಪ್ರಯತ್ನವನ್ನು ಯಾರಾದರೂ ಮಾಡಿದರೆ, ಈ ಸದನದ ಕಲಾಪಗಳನ್ನು ನಿರ್ವಹಣೆ ಮಾಡತಕ್ಕಂಥ ನಮ್ಮ ಅರ್ಹತೆ ಬಗ್ಗೆ ಯಾರಾದರೂ ಪ್ರಶ್ನೆ ಮಾಡಿದಾಗ ಅವರಿಗೆ ಅರ್ಹತೆ ಇದೆಯೇ ಇಲ್ಲವೇ ಎಂದು ಹೇಳಿ ಅವರ ಅರ್ಹತೆಯನ್ನು ಏನು ಎಂದು ಕೇಳತಕ್ಕಂಥ ಈ ಹಕ್ಕು ಈ ಸದನಕ್ಕೆ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಧ್ಯಕ್ಷರೇ, ನಾವು ಈ ಸದನದಲ್ಲಿ ರಾಜ್ಯಾಂಗಬದ್ಧವಾಗಿ ನಾವೇ ಫ್ರೇಮ್ ಮಾಡಿರತಕ್ಕಂಥ ರೂಲ್ಸ್‌ನ್ನು ಉಲ್ಲಂಘನೆ ಮಾಡಿದಾಗ ಯಾರಿಗಾದರೂ ಅದು ಹೇಳುವುದಕ್ಕೆ ಹಕ್ಕಿದೆ ಎನ್ನುವಾಗ, ಹೀಗಾದಾಗ ಜಸ್ಟೀಸ್ ಆದ ಅವರಿಗೆ ಅದನ್ನು ಹೇಳುವುದಕ್ಕೆ ಹಕ್ಕು ಇಲ್ಲ ಎಂದು ಹೇಳಬೇಕಾಗುತ್ತದೆಯೇ?

ಅಧ್ಯಕ್ಷರು: ನಾನು ಈ ಸದನಕ್ಕೆ ಮೂರು ಬಾರಿ ಆರಿಸಿ ಬಂದಾಗಲೂ ಕೂಡ ತಾವು ನೋಡಿರಬಹುದು ನಾನು ಸ್ವತಃ ಪ್ರಮಾಣವಚನ ತೆಗೆದುಕೊಂಡಿರತಕ್ಕಂಥಾದ್ದು ಸತ್ಯ ಮತ್ತು ನಿಷ್ಠೆ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಅಲ್ಲ. ಈ ರಾಜ್ಯಾಂಗಕ್ಕೆ ಅತ್ಯಂತ ಪ್ರಾಮಾಣಿಕವಾದಂಥ ಗೌರವವನ್ನು ಕೊಡತಕ್ಕಂಥ ಸ್ವಭಾವ ನನ್ನದು ಇದೆ.

ರಾಜ್ಯಾಂಗವೇ ನನ್ನ ಪಾಲಿಗ ದೇವರು. ರಾಜ್ಯಾಂಗವನ್ನು ಉಲ್ಲಂಘನೆ ಮಾಡುವಂಥ, ನಮ್ಮ ನಿಯಮಾವಳಿಯನ್ನು ಉಲ್ಲಂಘನೆ ಮಾಡತಕ್ಕಂಥ ಉದ್ದೇಶ ನಮಗೆ ಇಲ್ಲ. ಸದನದ ಹಕ್ಕನ್ನು ಸಾರ್ವಭೌಮತೆಯನ್ನು ಯಾರಾದರೂ ಕೂಡ ಹದ್ದುಮೀರಿ ವರ್ತಿಸಿ ಪ್ರಶ್ನೆ ಮಾಡತಕ್ಕಂಥ ಪ್ರಯತ್ನ ಮಾಡಿದರೆ ಈ ಅಧ್ಯಕ್ಷ ಸ್ಥಾನ ದೊಡ್ಡದು. ನಾನು ಬಹಳ ಸಣ್ಣವನು. ನಾನು ಇವತ್ತು ಇರುತ್ತೇನೆ, ನಾಳೆ ಹೋಗುತ್ತೇನೆ. ಆದರೆ ನಾನು ಇವತ್ತು ಅದನ್ನು ಹಾಗೆಯೇ ಬಿಟ್ಟುಹೋದರೆ ನಾಳೆ ಅದು ಒಂದು ಹೊಸ ಪದ್ಧತಿಯಾಗುತ್ತದೆ. ಈ ಸದನದ ಗೌರವ ಮತ್ತು ಸಾರ್ವಭೌಮತೆಯನ್ನು ಎತ್ತಿಹಿಡಿಯತಕ್ಕಂಥ ಉನ್ನತ ಜವಾಬ್ದಾರಿಯನ್ನು ಇಡೀ ಸದನ ಅವಿರೋಧವಾಗಿ ಆಯ್ಕೆಮಾಡಿ ನನ್ನ ತಲೆಯ ಮೇಲೆ ಇಟ್ಟಿದ್ದೀರಿ. ಆದ್ದರಿಂದ ನಾನು ಅಪರಾಧಿ ಆಗುವುದಕ್ಕೆ ಸಾಧ್ಯವಿಲ್ಲ. ನನಗೆ ಸದನದ ಸಾರ್ವಭೌಮತೆಯನ್ನು ಕಾಪಾಡಬೇಕಾಗಿದೆ. ಈ ಸದನದ ಗೌರವನ್ನು ಉಳಿಸಬೇಕಾಗಿದೆ. ಏನದರ ಅರ್ಥ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸದನದ ಸಾರ್ವಭೌಮತೆಯನ್ನು ನಾನೇನೂ ಅಲ್ಲಗಳೆಯುತ್ತಿಲ್ಲ. ಅಥವಾ ಸಾರ್ವಭೌಮತೆ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಸಾರ್ವಭೌಮತೆಯ ಹೆಸರಿನಲ್ಲಿ ನಾವು ಯಾರಾದರೂ -

(ಗೊಂದಲ)

ಅಧ್ಯಕ್ಷರು: ಇರಿ, ಅವರ ಮನಸ್ಸಿನಲ್ಲಿರುವ ಅನುಮಾನವನ್ನು ನಾನು ತೆಗೆಯುತ್ತಿದ್ದೇನೆ. ಅದು ಲೋಕಕ್ಕೆ ಗೊತ್ತಾಗಲಿ.

ಶ್ರೀ ಡಿ.ಕೆ.ಶಿವಕುಮಾರ್: ತಮ್ಮನ್ನು ಅವರು ಪ್ರಶ್ನೆ ಮಾಡುವುದನ್ನು ನಾವು ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಶಿವಕುಮಾರ್ ಅವರೇ, ಸ್ವಲ್ಪ ತಾಳ್ಮೆ ಇರಲಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ನಾವು ಇದನ್ನು ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು: ಯಾರೂ ಬೇಸರಪಟ್ಟುಕೊಳ್ಳಬೇಡಿ. ನಾನು ಏನು ಹೇಳುತ್ತಿದ್ದೇನೆ ಎಂದರೆ ಈ ಸದನ ಒಂದುವೇಳೆ ಮಾಡತಕ್ಕಂಥ ಯಾವುದಾದರೂ ಒಂದು ಶಾಸನ ನಿಯಮಬದ್ಧವಾಗಿ ಇಲ್ಲದೇ ಹೋದರೆ, ಯಾರಾದರೂ ಸಾರ್ವಜನಿಕರು ಪ್ರಶ್ನೆ ಮಾಡಿದಾಗ ಆವಾಗ ಬೇಕಾದರೆ ಅವರು ಜಡ್ಜ್‌ಮೆಂಟ್ ಬರೆಯತಕ್ಕಂಥ ವೇಳೆಗೆ ಆ ಶಾಸನವನ್ನು ಹೊಡೆದು ಹಾಕಬಹುದು, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು;

ಅತ್ಯಂತ ಕಠಿಣವಾದ ಪದಗಳನ್ನು ಬಳಸಬಹುದು. ಅದರ ಮೇಲೆ ಚರ್ಚೆ ಮಾಡತಕ್ಕಂಥ ಹಕ್ಕು ಈ ಸದನಕ್ಕೆ ಬರುವುದಿಲ್ಲ. ನ್ಯಾಯಾಂಗಕ್ಕೆ ಆ ಗೌರವ ಇದೆ, ಹಕ್ಕು ಇದೆ. ಆದರೆ, ಸಾರಾಸಗಟಾಗಿ ನಮಗೆ ಅರ್ಹತೆ ಇಲ್ಲ, ನಮಗೆ ಯಾವಾಗಲೂ ನೀವು ಕಳಪೆ ಮಟ್ಟದ ಜನ ಎಂದು ಹೇಳಿದರೆ ನಾವು ನಮ್ಮ ಮನೆಗೆ ವಾಪಸ್ಸು ತಾನೇ ಹೇಗೆ ಹೋಗಬೇಕು? ನಿಮ್ಮ ಮನೆಯಲ್ಲಿ ನಿಮ್ಮ ಯಜಮಾನರು ಕೇಳಿದರೆ ಏನು ಹೇಳುತ್ತೀರಿ? ನನಗಂತೂ ನನ್ನ ಮಗಳು ಲಾ ಓದುತ್ತಿದ್ದಾಳೆ. ಮಣಿಪಾಲ್‌ನಿಂದ ನನಗೆ ಫೋನ್ ಮಾಡಿ ಕೇಳುತ್ತಾಳೆ 'ನಿಮಗೆ ನಾಚಿಕೆ ಇಲ್ಲವೇ? ಹೀಗೆ ಅನ್ನಿಸಿಕೊಂಡು ಇನ್ನೂ ಮುಂದುವರೆಯುತ್ತೀರಾ?' ಎಂದು ಕೇಳಿದಳು. ನಾನು ಏನು ಹೇಳಬೇಕು? ಬೇರೆ ಯಾರಿಗೂ ಬೇಡ, ಕೊನೆಯಪಕ್ಷ ನನ್ನ ಮನೆಯೊಳಗಾದರೂ ನಾನು ಉತ್ತರ ಹೇಳಬೇಕಲ್ಲಾ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಆತ್ಮಸಾಕ್ಷಿಯಾಗಿ ನಾವು ಪ್ರಮಾಣವಚನ ತೆಗೆದುಕೊಂಡಿದ್ದೇವೆ. ಆ ಪ್ರಕಾರವಾಗಿ...

ಅಧ್ಯಕ್ಷರು: ನನಗೆ ಬಂದಿರುವ ಕಷ್ಟವೇ ಇದು. ಇಂತಹ ಸನ್ನಿವೇಶದಲ್ಲಿ, ನನ್ನ ವೈಯಕ್ತಿವಾದ ಜೀವನದಲ್ಲಿ ಬಂದಿರತಕ್ಕಂಥ ಕಷ್ಟವೇ ಅದು. ಖಾಸಗಿಯಾಗಿ, ಸಾರ್ವಜನಿಕವಾಗಿ ಆತ್ಮಸಾಕ್ಷಿ ಎನ್ನುವುದು ನನ್ನಲ್ಲಿ ಬಹಳ ಪ್ರಬಲವಾಗಿ ಕೆಲಸ ಮಾಡುತ್ತದೆ. ಹಾಗಾಗಿ ಯಾವ ಸಂದರ್ಭದಲ್ಲೂ ಕೂಡ ಕನ್‌ಫ್ಯೂಸ್ ಮಾಡಿಕೊಳ್ಳುವುದಕ್ಕೆ ಅದು ಬಿಡುವುದಿಲ್ಲ. ಆದ್ದರಿಂದ ಆ ಕಾನ್‌ಶನ್ಸ್ ಏನಿದೆ ಅದು ಡಿಕ್ಟೇಟ್ ಮಾಡಿ ಬಿಡುತ್ತದೆ. That is the whole problem. I think, I have given the ruling. You should kindly concede.

ಶ್ರೀಮತಿ ಪ್ರಮೀಳಾ ನೇಸರ್ಗಿ: ಪ್ರಿವಿಲೇಜನ್ನು ಇಲ್ಲಿ ಚರ್ಚೆ ಮಾಡಬಹುದೇ ಅಂತ ನಾನು ಕೇಳಿದ್ದು.

ಅಧ್ಯಕ್ಷರು: ಅವರು ಏನು ಹೇಳುತ್ತಾರೆ ಎಂದು ಕೇಳೋಣ. ಅವರು ಆಡಿರತಕ್ಕಂಥ ಕೆಲವು ಮಾತುಗಳನ್ನು ನಾನು ಕಡತದಿಂದ ತೆಗೆದಿದ್ದೇನೆ. ಅವರು 'ನಿಮ್ಮ ರೂಲಿಂಗ್‌ನ್ನು ನಾನು ಪ್ರಶ್ನೆ ಮಾಡುತ್ತಿಲ್ಲ' ಎಂದು ಏನೋ ಹೇಳುವುದಕ್ಕೆ ಹೊರಟಿದ್ದಾರೆ. ಅವರು ಏನು ಹೇಳುತ್ತಾರೆ ಎಂದು ಕೇಳಿಕೊಂಡು ನಂತರ ನಾನು ಹೇಳುತ್ತೇನೆ. ತಾವು ಕ್ರಿಯಾಲೋಪ ಎತ್ತಿದಿರಿ. ಅದಕ್ಕೆ ರೂಲಿಂಗ್ ನಾನು ಕೊಟ್ಟಿದ್ದೇನೆ.

SRI J.A.FERNANDES: Speaker Sir, can I intervene on this debate?

MR. SPEAKER: Not necessary. Please co-operate.

ಏಕೆಂದರೆ ಬಹಳ ಜನ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ನೀವು ಎರಡು ನಿಮಿಷದಲ್ಲಿ ಮುಗಿಸಿಬಿಡಿ.

+ ಶ್ರೀ ಎಚ್.ಎನ್.ನಂಜೇಗೌಡ: ಒಂದು ವಿಷಯದಲ್ಲಿ ಇಲ್ಲಿ ಕ್ಲಾರಿಫೈ ಮಾಡುತ್ತೇನೆ. ಯಾವುದೇ ನ್ಯಾಯಮೂರ್ತಿ ಬಗ್ಗೆ ನನಗೆ ಬೇಸರ ಇಲ್ಲ, ಬೇಸರಪಡುವುದಕ್ಕೆ ಕಾರಣ ಇಲ್ಲ. ಏಕೆಂದರೆ, ನಾನು ಯಾವುದೇ ಕೋರ್ಟ್‌ನಲ್ಲಿ ಕೇಸ್ ಹಾಕಿಲ್ಲ. ಯಾವುದೇ ಕೋರ್ಟ್‌ನಲ್ಲಿ ವಕಾಲತ್ತೂ ಹಾಕಿಲ್ಲ. ಇಲ್ಲಿಯವರೆಗೆ ಪ್ರಾಕ್ಟೀಸೂ ಮಾಡಿಲ್ಲ, ಲಾ ಪರೀಕ್ಷೆ ಪಾಸ್ ಮಾಡಿದ್ದೇನೆ ಅಷ್ಟೆ. ಫಿರ್ಯಾದಿಯಾಗಿ, ಅಪರಾಧಿಯಾಗಿ ಕೋರ್ಟ್ ಮುಂದೆಯೂ ಹೋಗಿಲ್ಲ. ಅನಾವಶ್ಯಕವಾಗಿ ನ್ಯಾಯಮೂರ್ತಿಗಳ ಬಗ್ಗೆ ನನಗೆ ಕೆಟ್ಟ ಅಭಿಪ್ರಾಯ ಬರುವುದಕೆ ಸಾಧ್ಯವಿಲ್ಲ. ಬಹುಶಃ ನ್ಯಾಯಾಂಗದ ಬಗ್ಗೆ ಅತಿ ಹೆಚ್ಚಿನ ಗೌರವವನ್ನು ಕೊಡುವವರಿದ್ದರೆ, ಅದರಲ್ಲಿ ನಾನೂ ಒಬ್ಬ, ಅದನ್ನು ತಲೆಬಾಗಿ ನಾನು ಒಪ್ಪಿಕೊಳ್ಳುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ, ಇದನ್ನು ಓದಿಬಿಡುತ್ತೇನೆ. ಇದು ಇರ್ರಿಲೆವೆಂಟ್ ಆದರೆ, ಬೇಕಾದರೆ ಅದನ್ನೂ ಹೊಡೆದು ಹಾಕಿ. ಇದು ವಿ.ಆರ್.ಕೃಷ್ಣಯ್ಯರ್‌ರವರು ಹೇಳಿರುವುದು. 'Our Courts on Trial'. (P151): 'The Judicial sector must be transformed into an arm of the constitutional revolution. The charge that its fire power is used as an ally of the dubious classes is grossly exaggerated but is notwithout substance. Justice Chinnappa Reddy's observations are some recent evidence.

I quote:

We haye come across cases where the collection of public revenue has been seriously jeopardised and budgets of Government and local authorities affirmatively prejudiced to the point of precariousness consequent upon interim orders made by courts. We have come across cases where buses and lorries are being run under orders of court though they were either denied permits or their permits have been cancelled or suspended by the Transport Authorities. We have come across cases where the collection of monthly rents payable by excise contractors has been stayed with the

result that at the end of the year the contractor has paid nothing, but made his profits from the shop and walked out. We have come across cases where dealers in foodgrains and essential commodities have been allowed to take back the stocks seized from them as if to permit them to continue to indulge in the very practices which were to be prevented by the seizure." ಇದನ್ನು ಏಕೆ ಹೇಳಿದೆ ಎಂದರೆ, ಜ್ಯುಡಿಷಿಯಲ್ ಪ್ರೊನೌನ್ಸ್‌ಮೆಂಟ್‌ನಿಂದ ಏನೇನು ಅನಾಹುತ ಆಗಬಹುದು ಎಂಬುದನ್ನು ಅವರು ಇಲ್ಲಿ ಹೇಳಿದ್ದಾರೆ. ಇದು ಒತ್ತಟ್ಟಿಗೆ ಇರಲಿ. ಇವತ್ತು ಆ ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೇನೆಂದರೆ, ನಾನು ಎರಡೇ ಮಾತಿನಲ್ಲಿ ಮುಗಿಸಿಬಿಡುತ್ತೇನೆ. ನಾವು ಮಾಡುವಂಥ ಕಾನೂನುಗಳು ಭಯಾನಕ ಎಂದುಬಿಟ್ಟರು. ಈ ಸಭೆಯ ಘನತೆ, ಗೌರವ ಮತ್ತು ಹಕ್ಕು ಬಂದಾಗ, ಇದು ಯಾವ ಪಕ್ಷದ ವೇದಿಕೆಯೂ ಆಗುವುದಕ್ಕೆ ಸಾಧ್ಯವಿಲ್ಲ. ಇದು ವಿಧಾನ ಸಭೆ, ಇದರ ಅಧಿಕಾರವನ್ನು ಯಾರೂ ಪ್ರಶ್ನೆ ಮಾಡುವ ಹಾಗೆ ಇಲ್ಲ. ನೀವು ಅದನ್ನು ಡಿಲೀಟ್ ಮಾಡುತ್ತೇವೆಂದಾಗ, ನನಗೆ ಗೊತ್ತಿತ್ತು ಪ್ರಿಸಿಡೆಂಟ್ಸ್ ಇದೆ. ನಾವು ಏನೇ ಮಾತನಾಡಿದರೂ ಡಿಲೀಟ್ ಮಾಡುವ ಹಾಗೆ ಇಲ್ಲವೆಂದೂ ನನಗೆ ಗೊತ್ತಿದೆ. ಆದರೆ, ಸೌಜನ್ಯ ಮತ್ತು ಒಳ್ಳೆಯ ಸಂಪ್ರದಾಯ ಹಾಕಬೇಕೆಂಬ ಹಿರಿಯರ ಮಾತಿಗೆ ನಾವು ಬೆಲೆ ಕೊಡಬೇಕಾಗುತ್ತದೆ. ನಾವೇನೂ ಅತಿ ಬುದ್ಧಿವಂತರಲ್ಲ, ಹುಟ್ಟುತ್ತಲೇ ಯಾರೂ ಜಾಣರಾಗಿ ಬರುವುದಿಲ್ಲ; ನಾವು ಸರ್ವಜ್ಞರಲ್ಲ. ನಮಗೆ ತಿಳಿದುದ್ದನ್ನು ನಾವು ಹೇಳಬೇಕಾಗುತ್ತದೆ. ಆದರೆ, ನಮ್ಮ ಮೇಲೆ ಧಾಳಿ ನಡೆದಾಗ, ನಮ್ಮ ಹಕ್ಕಿನ ಬಗ್ಗೆಯೇ ಚ್ಯುತಿ ಬಂದ ಕಾಲದಲ್ಲಿ ನಾವು ಸುಮ್ಮನಿರುವುದಕ್ಕೆ ಆಗುವುದಿಲ್ಲ. ದಯಮಾಡಿ ನೋಡಿ, ಅವರು ಏನು ಹೇಳಿದರು. ಕೊನೆಗೆ ಅವರು ಹೇಳಿದ್ದಾರೆ. ನಮಗೆ ರಕ್ಷಣೆ ಕೊಡುವವರು ಯಾರೂ ಇಲ್ಲ, ನೀವೇ ಲಾಯರುಗಳು ರಕ್ಷಣೆ ಕೊಡಿ ಎಂದು ಹೇಳಿದರು. ಇನ್‌ಸೈಟ್ ಮಾಡುವುದು. ನಿನ್ನೆ ರಾಜ್ಯಪಾಲರ ಹತ್ತಿರ ಹೋಗಿದ್ದಾರೆ. 356ನೇ ವಿಧಿ ಉಪಯೋಗಿಸಿ, ಈ ಸಭೆಯನ್ನು ಡಿಸಾಲ್ವ್ ಮಾಡಬೇಕೆಂದು ಕೇಳಿದ್ದಾರೆ. ಕೆಲವರು 211ನ್ನು ಭಾರಿ ಹೇಳುತ್ತಾರೆ. Legally 211 is subjected to the provisions of other provisions. Whereas under 194, ಅದೇನು ಅವರು ಮಗ್ಗಿ ಓದುವುದಿಲ್ಲವೇನೋ ಗೊತ್ತಿಲ್ಲ. 194 ಬಂದಮೇಲೆ 211 ಬರಬೇಕು. 194 ಓದಬೇಕು. ನಮಗೆ ಕೊಟ್ಟಿರತಕ್ಕ ಇಮ್ಯುನಿಟಿ, ನನಗೆ ಗೊತ್ತಿದೆ. ಇದೂ ಗೊತ್ತಿದೆ. ಇಂತಹ ವಿಚಾರ ಇರತಕ್ಕಂಥ ಕಾಲದಲ್ಲಿ ಲಾಯರುಗಳು ಹೇಳುತ್ತಾರೆ. ಯಾರೋ ಒಂದು ಮಾತು ಹೇಳಿದರು, ತಾವು ಬೇಜಾರು ಮಾಡಿಕೊಳ್ಳಬೇಡಿ. ಯಾವ ಲಾಯರ್‌ಗೂ ಅಫೆಂಡ್ ಮಾಡುವುದೂ ಇಲ್ಲ, ಯಾರನ್ನು ತಮಾಷೆ ಮಾಡುವುದಕ್ಕೂ ಅಲ್ಲ. ಕೇಸ್ ಬಂತು, ಫಿರ್ಯಾದಿ ಲಾಯರನ್ನೇ

ಇಟ್ಟಿಲ್ಲ. ಜಡ್ಜ್ ಹೇಳಿದರು, ಮರದ ಕೆಳಗೆ ಪ್ರಾಕ್ಟೀಸ್ ಮಾಡುತ್ತಿರಬೇಕು, ಬೇಗ ಕರೆದುಕೊಂಡು ಬನ್ನಿ ಎಂದು. ಅವರು ಹೋಗಿ ಕರೆದುಕೊಂಡು ಬರುತ್ತಾರೆ. ಅವರನ್ನು ಇದೇನು ಎಂದು ಕೇಳಿದಾಗ, ಅವರು ಮರದ ಕೆಳಗೆ ಪ್ರಾಕ್ಟೀಸ್ ಮಾಡುವವರೆಲ್ಲಾ ಜಡ್ಜಸ್ ಆಗಿಬಿಟ್ಟರು. ಎಂದು ಹೇಳುತ್ತಾರೆ. ಇವರ ಜ್ಞಾನಕ್ಕೆ ನಾನು ಇನ್ನೇನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆರ್ಟಿಕಲ್ 356ನ್ನು ಉಪಯೋಗಿಸಿ ನಮ್ಮ ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಬೇಕೆಂದು ಹೇಳುತ್ತಾರಲ್ಲಾ. ಇಂತಹ ಮಹನೀಯರಿದ್ದಾರೆ. ಬಹುತೇಕ ಒಳ್ಳೆಯವರೂ ಇದ್ದಾರೆ. ಅಲ್ಲಿ 30-40 ಜನ ಬಂದಿದ್ದರು. ಇಂತಹ ಮಹನೀಯರ ಕೈಗೆ ಸಿಕ್ಕಿಕೊಂಡ ಕಕ್ಷಿದಾರರ ಗತಿ ದೇವರೇ ಕಾಪಾಡಬೇಕು.

MR. SPEAKER: I have understood the gist of the talk.. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ತಾವು ಮೂವ್ ಮಾಡಿರತಕ್ಕ ವಿಷಯವಾಗಿ, ಎಲ್ಲಾ ಪಕ್ಷಗಳಿಂದ ಹಲವಾರು ಜನ ಏನು ಸಹಿ ಹಾಕಿಕೊಟ್ಟಿದ್ದಾರೆ, ಇದು ಸದನದ ವಸ್ತುವಾಗಿದೆ. ಈ ವಿಚಾರ ಜೀವಂತ ಇದೆ. ಇವತ್ತು ಸಮಯದ ಅಭಾವ ಇರುವುದರಿಂದ ನಾನು ಚರ್ಚೆಗೆ ತೆಗೆದುಕೊಳ್ಳುತ್ತಾ ಇಲ್ಲ. ಪ್ರತ್ಯೇಕವಾಗಿ ಇದಕ್ಕೆ ಒಂದು ದಿನ ನಿಗದಿ ಮಾಡಿ, ನಾನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಅವತ್ತು ತಾವು ಮತ್ತು ಸಹಿ ಹಾಕಿರತಕ್ಕ ಇತರೇ ಸದಸ್ಯರು ಸವಿಸ್ತಾರವಾಗಿ ಏನು ಹೇಳಬಯಸುತ್ತೀರಿ. ನಮ್ಮ ಸದನದ ನಿಯಮಾವಳಿಗಳ ಚೌಕಟ್ಟಿಗೆ ಒಳಪಟ್ಟು ಹೇಳಬಹುದು. ಅದಕ್ಕೆ ಭಿನ್ನವಾದಂಥ ಅಭಿಪ್ರಾಯ ಇರತಕ್ಕಂಥವರೂ ಕೂಡ ಯಾರಾದರೂ ಇದ್ದರೆ, ಅವರೂ ಕೂಡ ಅವತ್ತು ತಮ್ಮ ವಾದವನ್ನು ಮಂಡಿಸುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ; ಇದು ತಮ್ಮಲ್ಲಿ ವಿನಂತಿ.

ಶ್ರೀ ವಾಟಾಳ್ ನಾಗರಾಜ್: ಒಂದಾದರೂ ತಾವು ಮಾಡಬೇಕಾಗುತ್ತದೆ. ಈ ಸದನವನ್ನು 356ನೇ ವಿಧಿ ಪ್ರಕಾರ ವಜಾ ಮಾಡಿ ನಿನ್ನೆ ಮೆರವಣಿಗೆ ಮಾಡಿದ್ದಾರಲ್ಲಾ, ಅದನ್ನು ಖಂಡನೆ ಮಾಡಿ. ಒಂದು ನಿರ್ಣಯ ಮಾಡಿ, ಇದು ಯಾವ ಕಾರಣ?

ಶ್ರೀಮತಿ ಪ್ರಮೀಳಾ ನೇಸರ್ಗಿ: ರಾಮಾಜೋಯಿಸರೂ ಹೇಳಿದ್ದಾರೆ. ಸಂವಿಧಾನ constitutional break-down ಆಗುತ್ತದೆ ಎಂದು. it means constitutional breakdown,

ಶ್ರೀ ವಾಟಾಳ್ ನಾಗರಾಜ್: ಈ ಸದನವನ್ನು ವಜಾ ಮಾಡಿ ಎಂದು ಹೇಳಿದ್ದಾರೆ, ಅಂಥಾದ್ದು ನಡೆದಿರುವುದೇನು? ಇದು ಸರಿಯಲ್ಲ, ಇದು ಅಪ್ರಾಮಾಣಿಕವಾದುದು. ಈ ಸದನವನ್ನು ವಜಾ ಮಾಡಿ ಎಂದು ಹೇಳುವ ಮಟ್ಟಕ್ಕೆ ಅವರು ಹೋಗುವುದಾದರೆ, ಅದು ಸರಿಯಲ್ಲ. ನಾವು ಈ ನೀತಿಯನ್ನು ಸ್ಪಷ್ಟವಾಗಿ ವಿರೋಧಿಸುತ್ತೇವೆ. ಇದೇನು

ಹುಡುಗಾಟವೇ? ಅವರ ಇಚ್ಛೆಗೆ ಬಂದಂತೆ, ಬಾಯಿಗೆ ಬಂದಹಾಗೆ ಮಾತನಾಡತಕ್ಕಂಥಾದ್ದು, ಇದಕ್ಕೆ ಏನು ಕಾರಣ? ಈ ಸದನವನ್ನು ವಿಸರ್ಜನೆ ಮಾಡುವುದಕ್ಕೆ ಅಂಥಾದ್ದು ಏನು ನಡೆದಿದೆ? ಅಂತಹ ಅಪರಾಧ ಏನಾಗಿದೆ? ಈ ಸದನದಲ್ಲಿ ಅಂತಹ ಅಪರಾಧ ಏನು ನಡೆದಿದೆ?

ಶ್ರೀ ಎಂ.ಸಿ.ನಾಣಯ್ಯ: 356ನೇ ವಿಧಿಯನ್ನು ಬಳಸಬೇಕೆಂದು ನನ್ನ ಬಳಗದ ಕೆಲವು ಮಿತ್ರರು ರಾಜ್ಯಪಾಲರನ್ನು ಭೇಟಿ ಮಾಡಿ, ಮನವಿಯನ್ನು ಕೊಟ್ಟಿರತಕ್ಕಂಥಾದ್ದು ಇವತ್ತು ಪತ್ರಿಕೆಯಲ್ಲಿ ಬಂದಿದೆ. ಈ 356ನೇ ವಿಧಿ ಬಗ್ಗೆ ನಮ್ಮ ಉಚ್ಚ ನ್ಯಾಯಾಲಯಗಳು ಮತ್ತು ಸರ್ವೋಚ್ಚ ನ್ಯಾಯಾಲಯ ಯಾವ ಸಂದರ್ಭದಲ್ಲಿ ಈ 356ನ್ನು ಬಳಸುವುದಕ್ಕೆ ಸಾಧ್ಯ ಎಂಬುದನ್ನು ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನೇ ಕೊಟ್ಟಿರುತ್ತದೆ. ಆದ್ದರಿಂದ, ನನ್ನ ಬಳಗದ ಮಿತ್ರರು ಈ 356ನೇ ವಿಧಿಯನ್ನು ಉಪಯೋಗಿಸಬಹುದೇ ಅಥವಾ ಆಗುವುದಿಲ್ಲವೇ ಎಂದು ಹೇಳತಕ್ಕ ಕನಿಷ್ಟ ಪ್ರಮಾಣದ ಶಕ್ತಿಯನ್ನು, ಆ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೋಡಿ, ಅದನ್ನು ಬಳಕೆ ಮಾಡಬಹುದೇ ಇಲ್ಲವೇ ಎಂಬುದನ್ನಾದರೂ ತಿಳಿದುಕೊಂಡು ಆ ಮನವಿಯನ್ನು ಕೊಟ್ಟಿದ್ದರೆ ನಾವು ಯಾವ ಒಂದು ವೃತ್ತಿಯಲ್ಲಿದ್ದೇವೆ, ಆ ವೃತ್ತಿಗೂ ಮತ್ತು ಸರ್ವೋಚ್ಚ ನ್ಯಾಯಾಲಯ ಕೊಟ್ಟಿರತಕ್ಕ ತೀರ್ಪಿಗೂ ಗೌರವ ಬರುತ್ತಾ ಇತ್ತು.

ಅಧ್ಯಕ್ಷರು: ನಾನೇನು ಹೇಳುತ್ತೇನೆಂದರೆ, ವಕೀಲರಾದ ಮಾತ್ರಕ್ಕೆ ಲಾ ಗೊತ್ತಿರಬೇಕೆಂದು ಇಲ್ಲ. ಈಗ ನಾನು ವಕೀಲ ಅಲ್ಲ, ನನಗೆ ಲಾ ಗೊತ್ತಿದೆ. ಪ್ರಾಕ್ಟೀಸ್ ಮಾಡುವುದಕ್ಕೆ ಅನುಕೂಲ ಇಲ್ಲದಿರಬಹುದು ಅಷ್ಟೆ.

ಶ್ರೀ ಎಂ.ಸಿ.ನಾಣಯ್ಯ: ಕಾನೂನನ್ನು ಎಲ್ಲಾ ಕಡೆ ಬಳಸಬಹುದು. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ, ವಕೀಲರಾದವರಿಗೆ ಕಾನೂನು ಗೊತ್ತಿರಬೇಕು, ಆದರೆ, ಕಾನೂನು ಗೊತ್ತಿರಬೇಕಾಗಿಲ್ಲ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ವಕೀಲರು ಕಾನೂನನ್ನು ಓದಿ, ಪಾಸ್ ಮಾಡಿಯೇ ವಕೀಲರಾಗಬೇಕಾಗುತ್ತದೆ. ಜೊತೆಯಲ್ಲಿ ಕಾನೂನನ್ನು ಕೆಲವು ಸಂದರ್ಭದಲ್ಲಿ ವ್ಯಾಖ್ಯಾನ ಮಾಡುವಾಗ, ಕಾನೂನನ್ನು ಎತ್ತಿಕೊಂಡು ಹೋಗತಕ್ಕ ಸಂದರ್ಭದಲ್ಲಿ ನಾವು ಹಂತ ಹಂತವಾಗಿ ಆ ಎತ್ತರಕ್ಕೂ ಏರಬೇಕಾಗುತ್ತದೆ. ನಮ್ಮ ಮಿತ್ರರು ಕೆಲವು ಜನ ರಾಜ್ಯಪಾಲರ ಹತ್ತಿರ ಹೋಗಿದ್ದು, ನಾವು ಈ ಸದನದಲ್ಲಿ ತೆಗೆದುಕೊಂಡಿರತಕ್ಕ ವಿಚಾರದ ಬಗ್ಗೆ ಮತ್ತು ನಾವು ಆಡಿರತಕ್ಕ ಮಾತುಗಳ ಬಗ್ಗೆ, there is a constiutional break-down, ಎಂಬುದನ್ನು ಹೇಳಿದ್ದಾರೆ. ಸದನವನ್ನು ನಡೆಸುತ್ತಾ ಇದ್ದೇವೆ, ನಿನ್ನೆಯಿಂದ ಚರ್ಚೆ ಮಾಡುತ್ತಾ ಇದ್ದೇವೆ. ತಾವು ತಂದಿರತಕ್ಕ ಅವಿಶ್ವಾಸ ನಿರ್ಣಯ ಇಲ್ಲಿ ಚರ್ಚೆಗೆ ಬಂದಿದೆ. ಮತ್ತು ಬಹಳ ದೊಡ್ಡ ಬಹುಮತದಿಂದ ನಮ್ಮ ಸರ್ಕಾರಕ್ಕೆ ಬೆಂಬಲ ಸಿಕ್ಕಿದೆ. ನಾವು ಸರ್ಕಾರವನ್ನು ನಡೆಸುತ್ತಾ ಹೋಗುತ್ತಿದ್ದೇವೆ. ಇದು ಅವರಿಗೂ ಗೊತ್ತಿದೆ.

constitutional machinery breakdown ಯಾವಾಗ ಎಂದು ಹೇಳತಕ್ಕಂಥಾದ್ದನ್ನು, ಕೆಲವು ಸಂದರ್ಭಗಳಲ್ಲಿ ವಕೀಲರು ವ್ಯಾಖ್ಯಾನ ಮಾಡಿ, ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕಾಗಿತ್ತು. ಆದ್ದರಿಂದ, ನಾವು ಇದನ್ನು ಖಂಡನೆ ಮಾಡಬೇಕಾದುದು ಬೇಡ.

ಅಧ್ಯಕ್ಷರು: ಬೇಡ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಬೇಜವಾಬ್ದಾರಿ.

ಅಧ್ಯಕ್ಷರು: ವಾಟಾಳರೇ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನ..

ಶ್ರೀ ಕಾಗೋಡು ತಿಮ್ಮಪ್ಪ: ಸದನದಲ್ಲಿ ಮಾತನಾಡುವುದಕ್ಕೆ ನಮಗೆ ಯಾವರೀತಿ ಸರ್ವ ಹಕ್ಕು ಇದೆಯೋ ಹಾಗೆ ಒಬ್ಬ ನಾಗರೀಕನಾದಂತವನೂ ತನ್ನದೇ ಆದ ಅಭಿಪ್ರಾಯವನ್ನು ಹೇಳುವುದಕ್ಕೆ ಹಕ್ಕಿದೆ. ನಾವು ಈ ಶಾಸನ ಸಭೆಯಲ್ಲಿ ಏನು ತೀರ್ಮಾನ ಮಾಡಬೇಕೆಂಬುದಕ್ಕೆ ಅವಕಾಶ ಮಾಡಬೇಕೇ ವಿನಹ, ನೀನು ಮಾತನಾಡುವುದು ಬೇಡ ಎಂದು ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಆ ರೀತಿ ಯಾರೂ ಹೇಳುತ್ತಾ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೇ, It is a fundamental right,- ಅವನ ಅಭಿಪ್ರಾಯವನ್ನು, ಅವನು ವ್ಯಕ್ತ ಮಾಡುತ್ತಾನೆ.

ಅಧ್ಯಕ್ಷರು: ಅದನ್ನು ಯಾರು ಪ್ರಶ್ನೆ ಮಾಡಿದರು?

2.00 ಪಿಎಂ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಾಟಾಳ್‌ನಾಗರಾಜ್‌ರವರು ಇದರ ಬಗ್ಗೆ ರೆಸಲ್ಯೂಷನ್ ಮಾಡಿ ಎಂದು ಹೇಳುತ್ತಿದ್ದಾರಲ್ಲಾ ಅದಕ್ಕೆ ಇವರು ಹೇಳುತ್ತಿದ್ದಾರೆ. ಕಾಗೋಡುತಿಮ್ಮಪ್ಪನವರು ಹೇಳುವುದು ಸರಿಯಾಗಿದೆ. ಮ್ಯಾಟರ್ ಪ್ರಿಸಿಪಿಟೇಟ್ ಮಾಡತಕ್ಕಂಥದ್ದು That is not good.

ಅಧ್ಯಕ್ಷರು: ಕರ್ನಾಟಕದ ಜನರು ಸಂವಿಧಾನಬದ್ಧವಾಗಿ ಇಲ್ಲಿರುವ 224 ಜನರನ್ನು ಆಯ್ಕೆ ಮಾಡಿ ಕಳಿಸಿದ್ದಾರೆ. ಇದು ಘನತೆವೆತ್ತ ಜನಪ್ರತಿನಿಧಿಗಳ ಸಭೆಯಾಗಿದೆ. ನಾನಾ ಜನರು ನಾನಾ ಕಾರಣಕ್ಕಾಗಿ ಹೇಳಿಕೆಗಳನ್ನು ಕೊಡುತ್ತಾರೆ, ಹೋರಾಟ ಮಾಡುತ್ತಾರೆ, ಅಭಿಪ್ರಾಯಗಳನ್ನು ಕೊಡುತ್ತಾರೆ, ಅವರವರದ್ದೇ ಆದ ವಾದವನ್ನು ಮಂಡಿಸುತ್ತಾರೆ. ಇದು ಪ್ರಜಾತಂತ್ರ ವ್ಯವಸ್ಥೆ, ಅದಕ್ಕೆಲ್ಲಾ ನಾವು ಬೇಜಾರು ಮಾಡಿಕೊಳ್ಳುವಂತಿಲ್ಲ. ಅನಾಮಧೇಯರ ಮಾತಿಗೆಲ್ಲಾ ನಾವಿಲ್ಲಿ ಪ್ರತಿಕ್ರಿಯೆ ವ್ಯಕ್ತಮಾಡುವುದು, ರೆಸಲ್ಯೂಷನ್

ಮಾಡುವುದು ಸಾರ್ವಜನಿಕರಿಗೆ ಅಪಮಾನ ಮಾಡಿದಂತಾಗುತ್ತದೆ. ಈ ಸದನದ ಗೌರವವನ್ನು ಕೆಳಕ್ಕೆ ಇಳಿಸಿದಂತಾಗುತ್ತದೆ. ಅದನ್ನೆಲ್ಲಾ ಅಲಕ್ಷ್ಯ ಮಾಡಿಕೊಂಡು ಹೋಗಬೇಕು.

ಶ್ರೀ ವಾಟಾಳ್‌ನಾಗರಾಜ್: ಇದು ಯಾವ ಅನ್ಯಾಯ, ಯಾವ ಅಪರಾಧಕ್ಕಾಗಿ ಸರ್ಕಾರವನ್ನು ವಜಾ ಮಾಡಿ ಎಂದು ಹೇಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ: ತಾವು ಇಲ್ಲಿ ಆ ರೀತಿ ಹೇಳಬೇಡಿ, ಬೇಕಾದರೆ ಸಾರ್ವಜನಿಕರ ಸಭೆಯಲ್ಲಿ ಆ ರೀತಿ ಹೇಳಿ.

ಅಧ್ಯಕ್ಷರು: ಇದರ ಬಗ್ಗೆ ಪ್ರತಿಕ್ರಿಯೆ ಮಾಡಲು ಸದನವನ್ನು ಉಪಯೋಗ ಮಾಡುವುದು ಬೇಡ. ಸದನದ ಗೌರವ ಬಹಳ ಎತ್ತರದ್ದು.

ಶ್ರೀ ವಾಟಾಳ್‌ನಾಗರಾಜ್: ಕಬ್ಬನ್ ಪಾರ್ಕ್‌ನಲ್ಲಿ ಶಾಸಕರ ಭವನವನ್ನು ಕಟ್ಟದಿದ್ದರೂ ಕಟ್ಟಿದ್ದರು ಎಂದು ಹೇಳುತ್ತಾರೆ. ಅವರೇ ಕಬ್ಬನ್ ಪಾರ್ಕ್‌ನಲ್ಲಿ ಉಚ್ಚನ್ಯಾಯಾಲಯದ ಕಟ್ಟಡವನ್ನು ಹೊಸದಾಗಿ ಕಟ್ಟಿದ್ದಾರೆ. ಅದರ ವಿರುದ್ಧ ನಾವು ಚಳುವಳಿ ಮಾಡಬೇಕಾಗುತ್ತದೆ.

ಶ್ರೀ ಕಾಗೋಡುತಿಮ್ಮಪ್ಪ: ಶಾಸಕರ ಭವನದ ಏರಿಯಾವನ್ನು ಕಬ್ಬನ್ ಪಾರ್ಕ್‌ನಲ್ಲಿ ಸೇರಿಸಿರುವುದೇ ಮೊದಲ ತಪ್ಪು. ತಾವೇಕೆ ಇದನ್ನು ಸೇರಿಸಬೇಕಾಗಿತ್ತು?

ಶ್ರೀ ವಾಟಾಳ್‌ನಾಗರಾಜ್: ಕಬ್ಬನ್‌ಪಾರ್ಕ್‌ನ್ನು ನೇರವಾಗಿ ಹಾಳುಮಾಡಿರುವವರು ಉಚ್ಚ ನ್ಯಾಯಾಲಯದವರು. ಹೊಸ ಕಟ್ಟಡವನ್ನು ಕಟ್ಟಿರುವವರು ಅವರು.

ಅಧ್ಯಕ್ಷರು: ಈ ವಿಚಾರವನ್ನು ಇಲ್ಲಿಗೆ ಬಿಡಿ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

(ಅ) ವಿಷಯ: ಬೆಳಗಾಂನಲ್ಲಿ ನವೆಂಬರ್ ಒಂದರಂದು ಕನ್ನಡಿಗರನ್ನು ಬಂಧಿಸಿರುವುದು.

+ ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ): ಮಾನ್ಯ ಅಧ್ಯಕ್ಷರೆ, ಕನ್ನಡದ ಗಂಡುಮೆಟ್ಟಿನ ಜಿಲ್ಲೆಯಾದ ಬೆಳಗಾಂನಲ್ಲಿ ನವೆಂಬರ್ ಒಂದರಂದು ರಾಜ್ಯೋತ್ಸವ ಮೆರವಣಿಗೆಯ ಸಂದರ್ಭದಲ್ಲಿ ಕೆಲವು ಮರಾಠಿ ದುಷ್ಕರ್ಮಿಗಳು ಮೆರವಣಿಗೆಯಲ್ಲಿ ಶಾಮೀಲಾಗಿ ಗೊಂದಲ ಮಾಡಿದಾಗ ಜಿಲ್ಲಾ ಪೋಲೀಸ್ ವರಿಷ್ಟರೇ ಮುಂದಾಗಿ 26 ಜನ ಕನ್ನಡಿಗರನ್ನು ಬಂಧಿಸಿ ಹಿಂಡಲಗಾ ಕಾರಾಗೃಹಕ್ಕೆ ತಳ್ಳಿದರಲ್ಲದೆ, ವಿದ್ಯುತ್